

# ಪ್ರಾಮಾಣಿಕತೆಯ ಫಲ

**ನಾಗ ಎಚ್. ಹುಬ್ಳಿ**

ಕಲೆ: ಗಣೇಶ ಆಚಾರ್ಯ

ಅನೇಕ ವರ್ಷಗಳ ಹಿಂದೆ ಆನಂದಪುರಿ ಎನ್ನುವ ನಗರವನ್ನು ಧನಿಷ್ಠ ಎನ್ನುವ ರಾಜ ಆಳುತ್ತಿದ್ದ. ಆತನ ಮಂತ್ರಿ ಬಹಳ ಬುದ್ಧಿವಂತನಾಗಿದ್ದ. ಆದರೆ, ಕಾಯಿಲೆಯೊಂದಕ್ಕೆ ತುತ್ತಾದ ಆತ, ಕೆಲ ದಿನಗಳ ಅನಂತರ ಇಹಲೋಕ ಯಾತ್ರೆಯನ್ನು ಮುಗಿಸಿದ. ಇದರಿಂದ ಬಹಳ ಬೇಸರಗೊಂಡ ರಾಜ, ರಾಜಸಭೆಯನ್ನು ನಡೆಸಿ, "ನಿಮಗೆಲ್ಲಾ ಗೊತ್ತಿರುವ ಹಾಗೆ ನಮ್ಮ ಮುಖ್ಯಮಂತ್ರಿಗಳು ನಮ್ಮನ್ನು ಅಗಲಿದ್ದಾರೆ. ಆ ಸ್ಥಾನಕ್ಕಾಗಿ ಯೋಗ್ಯನೂ, ಪ್ರಾಮಾಣಿಕನೂ ಆದ ವ್ಯಕ್ತಿಯೊಬ್ಬರನ್ನು ಆಯ್ಕೆ ಮಾಡುವುದು ನಮ್ಮ ಕರ್ತವ್ಯವಾಗಿದೆ. ನಾನು ಈ ಆಯ್ಕೆ ಪ್ರಕ್ರಿಯೆಯ ಜವಾಬ್ದಾರಿಯನ್ನು ರಾಜಗುರುಗಳಿಗೆ ಒಪ್ಪಿಸುತ್ತಿದ್ದೇನೆ..." ಎಂದು ಹೇಳಿದರು.

ರಾಜನಿಂದ ಈ ಜವಾಬ್ದಾರಿಯನ್ನು ವಹಿಸಿಕೊಂಡ ರಾಜಗುರುಗಳು ಮುಖ್ಯಮಂತ್ರಿ ಆಯ್ಕೆ ಪ್ರಕ್ರಿಯೆಯನ್ನು ಆರಂಭಿಸಿದರು. ಈ ಸ್ಥಾನಕ್ಕೆ ಯೋಗ್ಯವಾದವರನ್ನು ಆಯ್ಕೆ ಮಾಡಲು ಅವರು ರಾಜಭವನದಲ್ಲಿ ಒಂದು ಸ್ಪರ್ಧೆಯನ್ನು ಏರ್ಪಡಿಸಿದರು. ಆಸಕ್ತಿಯುಳ್ಳವರು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದೆಂದು ಹೇಳಿದರು. ಯಾರು ಈ ಸ್ಪರ್ಧೆಯಲ್ಲಿ ವಿಜೇತರಾಗುತ್ತಾರೊ ಅವರನ್ನು ಈ ರಾಜ್ಯದ ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡಲಾಗುವುದು' ಎಂದು ಡಂಗುರ ಹೊಡೆಸಿದರು.